ದಿನಾಂಕ:28.11.2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಎದುರುದಾರರ ಪರ ಶ್ರೀ ಕೆ ಎಂ ಬಿ ವಕೀಲರಿಂದಃ**

ನನ್ನ ತಮ್ಮ ನನಗಿಂತ 3 ವರ್ಷ ಚಿಕ್ಕವನ್ನು.ನನ್ನ ತಮ್ಮ ಮೃತಪಡುವ 2 ವರ್ಷಗಳ ಮುಂಚೆ ಅವನಿಗೆ ಕಿಡ್ನಿ ಫೇಲ್ ಆಗಿರುತ್ತದೆ. ನನ್ನ ತಮ್ಮನಿಗೆ ಸಕ್ಕರೆ ಖಾಯಿಲೆ ಇದೆ ಎಂದರೆ ಸರಿಯಲ್ಲ. ಕಿಡ್ನಿ ಫೇಲ್ ಆಗಿದ್ದರಿಂದ ವಾರಕ್ಕೆ 2 ಸಲಹೋಗಿ ಚಿತ್ರದುರ್ಗ ಆಸ್ಪತ್ರೆಯಲ್ಲಿ ಡಯಾಲಿಸಸ್ ಮಾಡಿಕೊಳ್ಳುತ್ತಿದ್ದರು ಎಂದರೆ ನಿಜ. ಅಪಘಾತವನ್ನು ನಾನು ನೋಡಿಲ್ಲ. ನನ್ನ ತಮ್ಮನನ್ನು ನಾನು ಹಿರಿಯೂರು ಆಸ್ಪತ್ರೆಯಲ್ಲಿ ನೋಡಿರುತ್ತೇನೆ. ನನ್ನ ಚಿಕ್ಕಪ್ಪನ ಮಗ ಷಣ್ಮುಖ, ನನ್ನ ತಾಯಿ ಮತ್ತು ನಾನು ಹಿರಿಯೂರು ಸರ್ಕಾರಿ ಆಸ್ಪತ್ರೆಗೆ ಹೋಗಿದ್ದೆವು. ಅಲ್ಲಿಂದ ತುಮಕೂರಿನ ಶ್ರೀದೇವಿ ಆಸ್ಪತ್ರೆಗೆ ಕರೆದು ಕೊಂಡು ಹೋಗಿದ್ದೆವು. ಅಲ್ಲಿ ನನ್ನ ತಮ್ಮನ ಎಡಗಾಲಿಗೆ ರಾಡ್ ಹಾಕಿರುತ್ತಾರೆ. ತುಮಕೂರಿನ ಶ್ರೀದೇವಿ ಆಸ್ಪತ್ರೆಯಲ್ಲಿ ಒಂದು ವಾರ ಇದ್ದು ಆಸ್ಪತ್ರೆಯಿಂದ ಬಿಡುಗಡೆ ಆಗಿತ್ತು. ಶ್ರೀದೇವಿ ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ ವಾರಕ್ಕೆ 2 ಸಲ ಹೋಗಿ ಚಿತ್ರದುರ್ಗದ ಆಸ್ಪತ್ರೆಯಲ್ಲಿ ಡಯಾಲಿಸಸ್ ಮಾಡಿಸಿಕೊಳ್ಳುತ್ತಿದ್ದರು. ಚಿತ್ರದುರ್ಗ ಆಸ್ಪತ್ರೆಗೆ ಡಯಾಲಿಸಸ್ ಗೆ ಬಿಟ್ಟು ಬೇರೆ ಯಾವುದಕ್ಕೂ ಹೋಗಿಲ್ಲ ಎಂದರೆ ನಿಜ. ಶ್ರೀದೇವಿ ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ ಬೇರೆ ಯಾವ ಆಸ್ಪತ್ರೆಯಲ್ಲಿ ಕಾಲಿಗೆ ಚಿಕಿತ್ಸೆ ಪಡೆದು ಕೊಂಡಿಲ್ಲ.

ಅಪಘಾತದ ನಂತರ ಚಿತ್ರದುರ್ಗದ ಆಸ್ಪತ್ರೆಗೆ ಡಯಾಲಿಸಸ್ ಗೆ ನನ್ನ ತಮ್ಮ ಒಬ್ಬನೇ ಹೋಗಿ ಬರುತ್ತಿದ್ದರು ಎಂದರೆ ನಿಜ. ಶ್ರೀದೇವಿ ಆಸ್ಪತ್ರೆಯ ಡಿಸ್ಚಾರ್ಜ್ ಸಮ್ಮರಿಯನ್ನು ಹೊರತು ಪಡಿಸಿ ನನ್ನ ತಮ್ಮ ಕಾಲಿಗೆ ಚಿಕಿತ್ಸೆ ಪಡೆದ ಬಗ್ಗೆ ಯಾವುದೇ ದಾಖಲೆಹಾಜರು ಪಡಿಸಿರುವುದಿಲ್ಲ. ಕಿಡ್ನಿ ವೈಪಲ್ಯದಿಂದಲೇ ನನ್ನ ತಮ್ಮ ತೀರಿಕೊಂಡ ಎಂದರೆ ಸರಿಯಲ್ಲ. ಅಪಘಾತದ ನಂತರ ನನ್ನ ತಮ್ಮ ಕೆಲಸಕ್ಕೆ ಹೋಗುತ್ತಿದ್ದ. ನನ್ನ ತಮ್ಮ ಮೃತ ಪಡುವ 2-3 ದಿನಗಳ ಮುಂಚೆಯೂ ಕೆಲಸಕ್ಕೆ ಹೋಗುತ್ತಿದ್ದ ಎಂದರೆ ನಿಜ. ನನ್ನ ತಮ್ಮ ಮೃತಪಟ್ಟಾಗ ರಾತ್ರಿ 8 ಗಂಟೆಯಾಗಿರುತ್ತದೆ. ನಾನು ಪಿ

ಯು ಸಿ ವರೆಗೆ ಓದಿರುತ್ತೇನೆ. ನನ್ನ ತಮ್ಮ ತೀರಿಕೊಂಡ ದಿನ ಬೆಳಿಗ್ಗೆವರೆಗೂ ಚನ್ನಾಗಿ ಇದ್ದರು. ನನ್ನತಮ್ಮನಿಗೆ ಮರಣ ಹೊಂದುವ ಯಾವುದೇಖಾಯಿಲೆ ಇರಲಿಲ್ಲ. ನಾವು ಪೊಲೀಸರೊಂದಿಗೆ ಮತ್ತು ವೈದ್ಯರೊಂದಿಗೆ ಶರೀಕಾಗಿ ಮರಣ ಹೊಂದಿರುವ ಕಾರಣದಿಂದ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕೂಲಿ ಕೆಲಸಕ್ಕೆ ಹೋಗುತ್ತಿದ್ದೇನೆ. ನನಗೆ ಮದುವೆಯಾಗಿರುವುದಿಲ್ಲ. ನನ್ನ ತಂದೆ ತಾಯಿ ಕೆಲಸಕ್ಕೆ ಹೋಗುತ್ತಿದ್ದು ಅವರ ಮತ್ತು ನನ್ನ ಸಂಪಾದನೆಯಿಂದ ಮನೆ ನಿರ್ವಹಣೆ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ.

ನನ್ನ ತಮ್ಮನ ಶವ ಸಂಸ್ಕಾರಕ್ಕೆ, ತಿಥಿಗೆ, ವಾಹನ ಬಾಡಿಗೆಗೆ, ವೈದ್ಯಕೀಯ ವೆಚ್ಚಕ್ಕೆ ರೂ. 5 ಲಕ್ಷ ಖರ್ಚು ಮಾಡಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಮ್ಮ ಗಾರೆ ಕೆಲಸದಿಂದ ತಿಂಗಳಿಗೆ ರೂ.15 ಸಾವಿರ ಸಂಪಾದಿಸುತ್ತಿದ್ದ ಎಂದು ಸುಳ್ಳುಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವಂತೆ ನನ್ನ ತಮ್ಮನಿಗೆ ಯಾವುದೇ ತೊಂದರೆಗಳು ಇರಲಿಲ್ಲ ಎಂದರೆ ಸರಿಯಲ್ಲ. ನನ್ನತಮ್ಮ ಅಪಘಾತದಿಂದ ಆದ ಗಾಯಗಳಿಂದ ಮೃತ ಪಟ್ಟಿಲ್ಲ ಆದ್ದರಿಂದ ವಿಮಾ ಕಂಪನಿ ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು